# ನಿಮ್ಮೊಡನೆ

## ಮಹಿಳೆಯರೇಕೆ ಶಿಕ್ಷಣದಲ್ಲಿ ಹಿಂದೆ?

ಮಹಿಳೆಯರೇಕೆ ಶಿಕ್ಷಣದಲ್ಲಿ ಇಷ್ಟೊಂದು ಹಿಂದುಳಿದಿದ್ದಾರೆ? ಆಧುನಿಕತೆ, ಸಾಮಾಜಿಕ ನ್ಯಾಯ ಮತ್ತು ದೇಶದ ಭಾರೀ ಪ್ರಗತಿಯ ಬಗ್ಗೆ ಇಷ್ಟೊಂದು ದೊಡ್ಡ ಧ್ವನಿಯಲ್ಲಿ ಮುಖಂಡರೆಲ್ಲ ಭಾಷಣ ಮಾಡುತ್ತಿದ್ದರೂ, ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಈಗಲೂ ನಮ್ಮಲ್ಲಿ ಮಡಿವಂತಿಕೆಯ ಧೋರಣೆಯೇ ಏಕೆ ಉಳಿದಿದೆ? 2011ರ ಜನಗಣತಿಯ ಪ್ರಕಾರ, ನಮ್ಮ ದೇಶದ ಅರ್ಧದಷ್ಟು ಹೆಣ್ಣುಮಕ್ಕಳು ಅನಕ್ಷರಸ್ಥರು! ಹೆಣ್ಣುಮಕ್ಕಳ ಕುರಿತ ಈ ತಾರತಮ್ಯದಲ್ಲಿ ಧರ್ಮಬೇಧವಿಲ್ಲ. ಮುಸ್ಲಿಮರಲ್ಲಿ ಶೇಕಡಾ 48.11ರಷ್ಟು ಹೆಣ್ಣುಮಕ್ಕಳು ಅನಕ್ಷರಸ್ಥರಾಗಿದ್ದರೆ, ಹಿಂದೂಗಳಲ್ಲಿ ಶೇಕಡಾ 44.03ರಷ್ಟು ಹೆಣ್ಣುಮಕ್ಕಳು ಅನಕ್ಷರಸ್ಥರು. ಅನಕ್ಷರಸ್ಥ ಮುಸ್ಲಿಂ ಹೆಣ್ಣುಮಕ್ಕಳ ಸಂಖ್ಯೆ 4.03 ಕೋಟಿಯಾಗಿದ್ದರೆ, ಹಿಂದೂ ಅನಕ್ಷರಸ್ಥ ಹೆಣ್ಣುಮಕ್ಕಳ ಸಂಖ್ಯೆ 20.60 ಕೋಟಿ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹೆಣ್ಣುಮಕ್ಕಳು ಅನಕ್ಷರಸ್ಥರಾಗಿದ್ದರೆ ಆ ಕುಟುಂಬದ ಮಕ್ಕಳಾದರೂ ಹೇಗೆ ಶಿಕ್ಷಣದಲ್ಲಿ ಮುಂದೆ ಬರಬೇಕು? 'ಹೆಣ್ಣೊಬ್ಬಳು ಕಲಿತರೆ ಶಾಲೆಯೊಂದು ತೆರೆದಂತೆ' ಎನ್ನುವುದು ಬರೀ ಬಾಯಿಮಾತಿನ ಪ್ರಚಾರ ಮಾತ್ರ ಆಗಿದೆಯೆ?

ನಮ್ಮಲ್ಲಿ ಬಹುತೇಕ ಜೀವನದ ಎಲ್ಲ ರಂಗಗಳಲ್ಲೂ ಪುರುಷರದ್ದೇ ಅಂತಿಮ ಮಾತು. ಜನಸಂಖ್ಯೆಯಲ್ಲಿ ಶೇಕಡಾ 50ರಷ್ಟು ಹೆಣ್ಣುಮಕ್ಕಳಿದ್ದರೂ ರಾಜಕೀಯ, ಧಾರ್ಮಿಕ, ಸಾಮಾಜಿಕ ರಂಗಗಳಲ್ಲಿ ಅವರ ಪ್ರಾತಿನಿಧ್ಯ ಕಡಿಮೆಯೇ. ಒಟ್ಟು ಸಾಕ್ಷರತೆಯಲ್ಲೂ ಪುರುಷರ ಪ್ರಮಾಣ ಶೇಕಡಾ 69.75 ಇದ್ದರೆ, ಮಹಿಳೆಯರದ್ದು ಶೇಕಡಾ 55.97 ಮಾತ್ರ. ಅದರಲ್ಲೂ ಹಳ್ಳಿಗಾಡಿನ ಮಹಿಳೆಯರದ್ದು ಇನ್ನೂ ದಯನೀಯ ಸ್ಥಿತಿ. ಅಲ್ಲಿ ಮಹಿಳೆಯರ ಸಾಕ್ಷರತೆ ಶೇಕಡಾ 49.61 ಮಾತ್ರವಿದೆ. ಒಂದು ಸಮಾಧಾನಕರ ಅಂಶವೆಂದರೆ, ನಗರಗಳಲ್ಲಿ ಇರುವ ಮಹಿಳೆಯರ ಸಾಕ್ಷರತೆ ಪ್ರಮಾಣ ಶೇಕಡಾ 70.17ರಷ್ಟಿದೆ.

ಮುಸ್ಲಿಂ ಹೆಣ್ಣುಮಕ್ಕಳ ಸಾಕ್ಷರತೆಯ ಪ್ರಮಾಣ ಇಷ್ಟೊಂದು ಕಡಿಮೆ ಆಗಿರಲು ಧಾರ್ಮಿಕ ವಲಯದ ಕಟ್ಟುನಿಟ್ಟುಗಳೇ ಕಾರಣ. ಮುಸ್ಲಿಮರ ಸಾಮಾಜಿಕ ಆಗುಹೋಗುಗಳನ್ನು ನಿರ್ಧರಿಸುವಲ್ಲಿ ಈಗಲೂ ಧರ್ಮಗುರುಗಳು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. 'ಹೆಣ್ಣುಮಕ್ಕಳು ಕುಟುಂಬ ನಿರ್ವಹಿಸಿದರೆ ಸಾಕು. ಅವರಿಗೇಕೆ ಶಿಕ್ಷಣ' ಎನ್ನುವ ಧಾರ್ಮಿಕ ಧೋರಣೆಯಿಂದಾಗಿ ಮುಸ್ಲಿಂ ಸಮುದಾಯದಲ್ಲಿ ಬಹುತೇಕ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಅದರ ಜೊತೆಗೆ, ಸಮುದಾಯದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಬಡವರು ಹೆಣ್ಣುಮಕ್ಕಳಿಗೆ ಮಾತ್ರವಲ್ಲ, ಗಂಡುಮಕ್ಕಳಿಗೂ ಶಿಕ್ಷಣ ಕೊಡಲು ಅಸಮರ್ಥರಾಗಿದ್ದಾರೆ. ಹಿಂದೂ ಧರ್ಮದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಅಡ್ಡಿಯಾಗಿರುವುದು ಜಾತೀಯ ತಾರತಮ್ಯ ಎನ್ನಬಹುದು. ಮೇಲ್ಜಾತಿಯ ಮಹಿಳೆಯರಲ್ಲಿ ಹೆಚ್ಚಿನವರಿಗೆ ಶಿಕ್ಷಣ ಸಿಗುತ್ತಿದೆಯಾದರೂ, ದಲಿತರು, ಆದಿವಾಸಿಗಳು ಮತ್ತು ಹಿಂದುಳಿದ ಜಾತಿಗಳಲ್ಲಿ ಮಹಿಳೆಯರಿಗೆ ಶಿಕ್ಷಣದ ಅವಕಾಶಗಳನ್ನು ಈಗಲೂ ನಿರಾಕರಿಸಲಾಗುತ್ತಿದೆ.

2011ರ ಜನಗಣತಿಯ ಪ್ರಕಾರ, ಜೈನ ಧರ್ಮೀಯ ಮಹಿಳೆಯರಲ್ಲಿ ಶೇಕಡಾ 86.42ರಷ್ಟು ಪ್ರಮಾಣದಲ್ಲಿ ಸಾಕ್ಷರತೆ ಇದೆ ಎನ್ನುವುದು ನಿಜಕ್ಕೂ ಹೆಮ್ಮೆಪಟ್ಟುಕೊಳ್ಳಬೇಕಾದ ವಿಚಾರ. ಹಾಗೆಯೇ ಕ್ರಿಶ್ಚಿಯನ್ ಮಹಿಳೆಯರಲ್ಲೂ ಶೇಕಡಾ 71.96ರಷ್ಟು ಮಹಿಳೆಯರು ಸಾಕ್ಷರರಾಗಿರುವುದು ಆಯಾ ಸಮುದಾಯದಲ್ಲಿ ಇರುವ ಪ್ರಗತಿಪರ ಧೋರಣೆಗಳಿಗೆ ಸಾಕ್ಷಿಯಾಗಿದೆ. ಈ ಸಮುದಾಯಗಳಿಂದ ಹಿಂದೂ ಮತ್ತು ಮುಸ್ಲಿಂ ಮುಖಂಡರು ಕಲಿತುಕೊಳ್ಳಬೇಕಾದ ಪಾಠಗಳು ಸಾಕಷ್ಟಿವೆ.

ಹಾಗೆ ನೋಡಿದರೆ ಇದು ಕೇವಲ ಸಮುದಾಯಗಳ ಮುಖಂಡರ ಹೊಣೆಗಾರಿಕೆಯಷ್ಟೇ ಅಲ್ಲ; ಸರ್ಕಾರಗಳ ಕಾರ್ಯಯೋಜನೆಗಳ ವೈಫಲ್ಯವೂ ಹೌದು. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಶಿಕ್ಷಣಕ್ಕೆ ಒತ್ತುಕೊಟ್ಟು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಸರ್ಕಾರಗಳು ಸೋತಿವೆ ಎನ್ನುವುದನ್ನೇ ಇದು ತೋರಿಸುತ್ತದೆ. ಹೆಣ್ಣುಮಕ್ಕಳು ಶಾಲೆಗೆ ಹೋಗದಂತೆ ಯಾವ ಸಮಸ್ಯೆಗಳು ಅವರನ್ನು ತಡೆಯುತ್ತಿವೆ ಎನ್ನುವುದರ ಬಗ್ಗೆ ನಿಖರ ಸಮೀಕ್ಷೆಗಳು ಆಗಬೇಕಿದೆ. ಮುಖ್ಯವಾಗಿ ಕಿತ್ತುತಿನ್ನುವ ಬಡತನ ಇರುವ, ಉದ್ಯೋಗಾವಕಾಶಗಳೇ ಇಲ್ಲದ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣವೂ ದುಬಾರಿಯಾಗಿ ಪರಿಣಮಿಸಿದೆಯೆ ಎನ್ನುವುದನ್ನು ಪರಿಶೀಲಿಸಬೇಕು. ಶಿಕ್ಷಣ ರಂಗದ ಖಾಸಗೀಕರಣವೂ ಎಲ್ಲೆಡೆ ಭರದಿಂದ ನಡೆದಿದೆ. ಖಾಸಗೀಕರಣ ಎಂದರೆ ದುಬಾರಿ ಶಿಕ್ಷಣ. ಇದು ಬಡವರಿಗೆ ಶಿಕ್ಷಣವನ್ನೇ ನಿರಾಕರಿಸುವ ಪ್ರಕ್ರಿಯೆ. ಹೊತ್ತು ಕೂಳಿಗೇ ಗತಿಯಿಲ್ಲದ ಬಡವರು, ಭಾರೀ ಶುಲ್ಕ ಕೊಟ್ಟು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಾದರೂ ಹೇಗೆ? ಕೇಂದ್ರ ಸರ್ಕಾರದ 2014–15ರ ಬಜೆಟ್‌ಗೆ ಹೋಲಿಸಿದರೆ, 2015–16ರ ಬಜೆಟ್‌ನಲ್ಲಿ ಶಿಕ್ಷಣ ರಂಗಕ್ಕೆ ಶೇಕಡಾ 17ರಷ್ಟು ಅನುದಾನ ಕಡಿತವಾಗಿದೆ. ಸರ್ವಶಿಕ್ಷಾ ಅಭಿಯಾನಕ್ಕೆ ಕಳೆದ ಬಜೆಟ್‌ನಲ್ಲಿ 28635 ಕೋಟಿ ರೂಪಾಯಿ ಇಟ್ಟಿದ್ದ ಸರ್ಕಾರ, ಈ ಸಾಲಿನಲ್ಲಿ ಅದನ್ನು 20 ಸಾವಿರ ಕೋಟಿಗೆ ಇಳಿಸಿರುವುದು ಏನನ್ನು ಸೂಚಿಸುತ್ತದೆ?

■ ಬಿ.ಎಂ.ಹನೀಫ್

ಹೆಣ್ಣುಮಕ್ಕಳು ಶಾಲೆಗೆ ಹೋಗದಂತೆ ಯಾವ ಸಮಸ್ಯೆಗಳು ಅವರನ್ನು ತಡೆಯುತ್ತಿವೆ ಎನ್ನುವುದರ ಬಗ್ಗೆ ನಿಖರ ಸಮೀಕ್ಷೆಗಳು ಆಗಬೇಕಿದೆ. ಮುಖ್ಯವಾಗಿ ಕಿತ್ತುತಿನ್ನುವ ಬಡತನ ಇರುವ, ಉದ್ಯೋಗಾವಕಾಶಗಳೇ ಇಲ್ಲದ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣವೂ ದುಬಾರಿಯಾಗಿ ಪರಿಣಮಿಸಿದೆಯೆ ಎನ್ನುವುದನ್ನು ಪರಿಶೀಲಿಸಬೇಕು.

